ಅ) ಈ ವರ್ಷದಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಋಣ ಮಂಜೂರಾತಿ ನೀಡಲಾಗುವುದೇ ?

ಆ) ಕೆಲವು ಪ್ರೌಢ ಶಾಲೆಗಳ ಕಟ್ಟಡಗಳು ಶಿಥಿಲವಾಗಿದ್ದು ಬೀಳುವ ಸಂಭವವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಕಟ್ಟಡಗಳನ್ನು ದುರಸ್ತಿ ಗೊಳಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೬ ಪ್ರೌಢ ಶಾಲೆಗಳು.

ಆ) ೮೭–೮೮ನೇ ಸಾಲಿನಲ್ಲಿ ಪ್ರೌಢಶಾಲೆಗಳಿಗೆ ಕಟ್ಟಡ ನಿರ್ಮಿಸಲು ಜಿಲ್ಲಾ ಪರಿಷತ್ ಗುಲ್ಬರ್ಗಾ ಜಿಲ್ಲಾ ಗುಲ್ಬರ್ಗ ಇಲ್ಲಿಗೆ ರೂ. ೫೦.೭೫ ಲಕ್ಷ ಬಿಡುಗಡೆ ಮಾಡಿದೆ.

ಇ) ಇಲ್ಲ.

ಈ) ಪ್ರಸ್ತುತ ವಿಷಯ ೧೯೮೭–೮೮ನೇ ಸಾಲಿನಿಂದ, ಜಿಲ್ಲಾ ಪರಿಷತ್ತುಗಳ ವಾಪ್ತಿಗೆ ಒಳಪಟ್ಟಿರುವುದರಿಂದ, ಸಂಬಂಧಿಸಿದ ಜಿಲ್ಲಾ ಪರಿಷತ್ತು ಕ್ರಮ ತೆಗೆದುಕೊಳ್ಳಬೇಕಾಗುವುದು.

ಕಾರವಾರದ ಸರ್ವಋತು ಬಂದರು

೩೬೪. ಶ್ರೀ ಪ್ರಭಾಕರ ಎಸ್. ರಾಣೆ (ಕಾರವಾರ).— ಮಾನ್ಯ ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರದ ಸರ್ವಋತು ಬಂದರು ನಿರ್ಮಾಣಕಾರ್ಯ ಪ್ರಾರಂಭವಾದಂದಿನಿಂದ ಈವರೆಗೆ ತಗಲಿದ ವೆಚ್ಚ ಎಷ್ಟು ?

ಆ) ಸದರಿ ಬಂದರಿಂದ ಪ್ರಥಮ ಹಂತದ ನಿರ್ಮಾಣ ಪೂರ್ಣಗೊಳ್ಳಲು ಇನ್ನೂ ಎಷ್ಟು ಕಾಲ ಬೇಕು ?

ಇ) ಕಾರವಾರ ಬಂದರಿಂದ ಎರಡನೇ ಹಂತದ ಕಾರ್ಯ ಪ್ರಾರಂಭಿಸಲು ಸರ್ಕಾರದವರು ಯೋಚಿಸಿದ್ದಾರೆಯೆ ?

ಈ) ಸದರೀ ಬಂದರನ್ನು ಸರ್ವಋತು ಬಂದರಾಗಿ ಪರಿವರ್ತಿಸಲು ಕೇಂದ್ರ ಸರ್ಕಾರದವರ ನೆರವು ಕೇಳಲಾಗಿದೆಯೇ ?

ಉ) ಹಾಗಿದ್ದಲ್ಲಿ ಕೇಂದ್ರ ಸರ್ಕಾರದವರು ಅದಕ್ಕೆ ತತ್ವಶಃ ಒಪ್ಪಿದ್ದಾರೆಯೇ ?

ಶ್ರೀ ಎಂ. ರಘುಪತಿ (ಬಂದರು ಮತ್ತು ಮೀನುಗಾರಿಕಾ ಸಚಿವರು).—

ಅ) ದಿನಾಂಕ ೩೧–೭–೧೯೮೭ರ ವರೆಗಿನ ವಿಚ್ರ್ ಒಟ್ಟು ೧೬.೬೨ ಕೋಟಿ ರೂ.ಗಳು.

ಆ) ೧೯೮೮ನೇ ಮಾರ್ಚ್ ತಿಂಗಳಲ್ಲಿ ಮುಗಿಸಲಾಗುವುದು.

ಇ) ಹೌದು.

ಈ) ಹೌದು.

ಉ) ಇಲ್ಲ

ಖಾಸಗಿ ಪ್ರೌಢ ಶಾಲೆಗಳಿಗೆ ೧೯೮೪–೮೫ರಲ್ಲಿ ಮಂಜೂರಾತಿ ಕೊಟ್ಟ ಬಗ್ಗೆ.

೬೭೫. ಶ್ರೀ ಮಲ್ಲಾರ್ಜುನಗೌಡ ಎಸ್. ಪಾಟೀಲ್ (ಸಂಕೇಶ್ವರ್).—ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದವರ ಆದೇಶದ ಮೇರೆಗೆ ಬೆಳಗಾಂ ಜಿಲ್ಲೆಯಲ್ಲಿ ವಿಶ್ವಭಾರತ ಸೇವಾ ಸಮಿತಿ ಶಿಕ್ಷಣ ಸಂಸ್ಥೆಯಿಂದ ಎಷ್ಟು ಸ್ಥಳಗಳಲ್ಲಿ ಹೈಸ್ಕೂಲುಗಳನ್ನು ಮಂಜೂರು ಮಾಡಲಾಗಿದೆ.

ಅ) ಹುಕ್ಕೇರಿ ತಾಲ್ಲೂಕಿನ ಮುತ್ನಾಳ ಗ್ರಾಮದ ಹೈಸ್ಕೂಲಿಗೆ ಯಾವ ವರ್ಷದಲ್ಲಿ ಮಂಜೂರು ಮಾಡಲಾಗಿದೆ.

ಆ) ಕರ್ನಾಟಕ ಮಹಾರಾಷ್ಟ್ರ ಗಡಿ ಪ್ರದೇಶದಲ್ಲಿರುವ ಈ ಶಾಲೆಗೆ ವಿಶೇಷಧನ ಸಹಾಯಂ (ಗ್ರಾಂಟ್) ಕೊಡುವುದಕ್ಕಾಗಿ ಸರ್ಕಾರದವರ ಕಾರ್ಯಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣರಾಜ್ಯ ಮಂತ್ರಿಗಳು)

ಅ) ೧೩ ಪ್ರೌಢಶಾಲೆಗಳನ್ನು ಮಂಜೂರು ಮಾಡಿದೆ.

ಆ) ೮೪-೮೫ನೇ ಸಾಲಿನಲ್ಲಿ ಮಂಜೂರು ಮಾಡಿದೆ.

ಇ) ಅನುದಾನ ಸಂಹಿತೆಯ ನಿಯಮಾವಳಿಯಂತೆ ಅನುದಾನ ಮಂಜೂರು ಮಾಡಲಾಗುತ್ತದೆ ವಿಶೇಷ ಧನ ಸಹಾಯಕ್ಕೆ ಯಾವ ಪ್ರಸ್ತಾವನೆಯೂ ಇರುವುದಿಲ್ಲ. ಬಂದರೆ ಪರಿಶೀಲಿಸಲಾಗುವುದು.

ಹಿಂಡಲಗದಲ್ಲಿ ನಡೆಸುತ್ತಿರುವ ಅನಧಿಕೃತ ಆಂಗ್ಲ ಮಾಧ್ಯಮ ಶಾಲೆಗಳ ಬಗ್ಗೆ

೬೮೪. ಶ್ರೀ ಬಿ ಐ. ಪಾಟೀಲ್, (ಉಚಗಾವ್).—ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ 'ಮಚ್ಛೆ' ಮತ್ತು ಹಿಂಡಲಗಾದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳು ಅನಧಿಕೃತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗುವುದೇ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿ).—

ಅ) ಬಂದಿರುವುದಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮರಾಠಿ ಪ್ರಾಥಮಿಕ ಶಾಲಾ ಶಿಕ್ಷಕರ ಹಾಗೂ ಮಕ್ಕಳ ಅನುಪಾತ.

೬೮೫. ಶ್ರೀ ಬಿ.ಐ ಪಾಟೀಲ್ (ಉಚಗಾವ್).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯಮಂತ್ರಿಈಕೆಳಕಂಡ ಪ್ರಶ್ನೆಗಳಿಗೆದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನಲ್ಲಿ ಮರಾಠಿ ಪ್ರಾಥಮಿಕ ಶಿಕ್ಷಕರುಗಳು ಸಾಕಷ್ಟು ಇಲ್ಲದೆ ಇರುವುದು ಹಾಗೂ ವಿದ್ಯಾರ್ಥಿಗಳ ಶಿಕ್ಷಕರ ಅನುಪಾತಕ್ಕನುಗುಣವಾಗಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಹುದ್ದೆಗಳನ್ನು ತುಂಬಲು ಜರೂರು ಕ್ರಮ ತೆಗೆದು ಕೊಂಡಿದೆಯೇ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಹೌದು.

ಆ) ಕೋರ್ಟಿನ ತಡೆಯಾಜ್ಞೆ ಇದ್ದುದರಿಂದ ಶಿಕ್ಷಕರನ್ನು ಕೊಡಲು ತಡವಾಗುತ್ತಿದೆ.